841

ಹಾಸನ ಡಿಸ್ಟ್ರಿಕ್ಟ್.

ಇನ್ಸ್ಟಿಹಾರ್ನ್ಮೆ ಗೋಷ್ವಾರೆ.

ತಾರೀಖು 30ನೆ ಏಪ್ರೆಲ್ 1904ನೆ ಮಲ್ಕುಂ[illegible]

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನದ ಡಿಸ್ಟ್ರಿಕ್ಟ್ ಮಂಜರಾಬಾದು ತಾಲ್ಲೂಕಾನಲ್ಲಿರುವ ಮಾರ್ನಹಳ್ಳಿ ಟೋಪೊಗೇಟಿನಲ್ಲಿ 1904ನೆ ಇಸವಿ ಜುಲೈ ಗುರ್ರೇ ತಾರೀಖು ಲಾಗಾಯಿತು 1905ನೆ ಇಸವಿ ಜೂನ್ 30ರ ವರಿಗೆ ಹನ್ನೆರಡು ತಿಂಗಳಕಾಲದಲ್ಲಿ ಸುಂಕ ವಸೂಲ್ಮಾಡುವ ಬಾಬನ್ನು ಸ್ಯ॥ 1904ನೆ ಇಸವಿ ಜೂನ್ ಮಾಹೆ [illegible]ನೆ ತಾರೀಖು ಸೋಮವಾರ ಮಧ್ಯಾನ್ಹ 12 ಘಂಟೆಗೆ ಸಕಲೇಶಪುರದ ಪೊಕ್ಕಾಂನಲ್ಲಿ ತಾಲ್ಲೂಕು ಕಛೇರಿಬಳಿ ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರವರ ರೂಬರೂಬು ಬಹಿರಂಗವಾಗಿ ಹೆಚ್ಚಾಮೂಲಕ ವಿಕ್ರಯಿಸುತ್ತೆ.

ಹರಾಜು ಷರತ್ತು ತಪಶೀಲುಗಳನ್ನು 1904 ಇಸವಿ ಮೇ ತಿಂಗಳು 12ನೆ ತಾರೀಖಿನ ಮೈಸೂರು ಗೆಜೆಟ್ಟು IIನೆ ಭಾಗ 289ನೆ ಪುಟದಲ್ಲಿ ಛಾಯಿಷ್ ಮಾಡಿರುತ್ತೆ.

ಇನ್ಸ್ಟಿಹಾರ್ನ್ಮೆ ಗೋಷ್ವಾರೆ.

ತಾರೀಖು 30ನೆ ಏಪ್ರೆಲ್ 1904.

ಹಾಸನದ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕ ಬೇಲೂರು ಸೀತಾವೆ ಮೇಲೆ 1904ನೆ ಜುಲೈ ಗುರ್ರೆ ಲಾಗಾಯಿತು 1905ನೆ ಜೂನ್ ತಿಂಗಳೊರು ವರಿಗೆ ಹನ್ನೆರಡು ತಿಂಗಳುಕಾಲ ಸುಂಕ ವಸೂಲ್ಮಾಡುವ ಹಕ್ಕನ್ನು ಬೇಲೂರು ತಾಲ್ಲೂಕು ಕಛೇರಿ ಸನ್ನಿಧಿಯಲ್ಲಿ 1904ನೆ ಇಸವಿ ಜೂನ್ 13ನೆ ತಾರೀಖು ಸೋಮವಾರ ದಿವಿ 12 ಘಂಟೆಗೆ ಹಾಸನದ ಡಿ॥ ಡೆಪ್ಯುಟಿ ಕಮಿಷ್ನರ್ ಸಾಹೇಬ್ರವರ ಆಥವ್ಯಾಜ್ಞವರಿಂದ ಅಧಿಕಾರ ಹೊಂದಿದ ಇತರ ಆಫಿಸರವರ ರೂಬರೂಬು ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಮತ್ತು ಹರಾಜು ತಾರೀಖಿನ ವರಿಗೆ ಕ್ರಮವಾಗಿ ಒರುವ ಬರಹಮೂಲಕವಾದ ದರಖಾಸ್ತುಗಳನ್ನು ಬೇಲೂರು ತಾಲ್ಲೂಕು ಅಮಲ್ದಾರ್ರು ಅಂಗೀಕರಿಸುತ್ತಾರೆ.

ಹರಾಜು ಷರತ್ತುಗಳು ಮತ್ತು ಇತರ ತಪಶೀಲುಗಳನ್ನು 1904ನೆ ಇಸವಿ ಮೇ ತಿಂಗಳು 12ನೆ ತಾರೀಖಿನ ಮೈಸೂರ ಗೆಜೆಟ್ಟು IIನೆ ಭಾಗ 291ನೆ ಪುಟದಲ್ಲಿ ಛಾಯಿಷ್ ಮಾಡಿರುತ್ತೆ.

ಪಿ. ಆರ್. ಡಬ್ಲ್ಯೂ. ವೆದರಾಲ್,
ಆ॥ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಇನ್ಸ್ಟಿಹಾರ್ನ್ಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಜೋಡಿ ಹೆಜ್ಜಿಗೇನಹಳ್ಳಿ ಗ್ರಾಮದಲ್ಲಿ ಸುಬ್ಬಣ್ಣಾಚಾರ್ ಅರ್ಥ ಹಿಸ್ಸೆ ಜಮೀನಿನಲ್ಲಿ ಅಣ್ಣಿಗರಿ ಕಾಮರಾವು ಮತ್ತು ಭೀಮರಾವು ಇವರಿಗೆ ಇರುವ ಹಕ್ಕು ಬಾಧ್ಯತೆ ಮೆಟ್ಟಿಗೆ ಸದರೀ ಕಾಮರಾವು ಮತ್ತು ಭೀಮರಾಯ್ತರಿಂದ ವಸೂಲಿ ಗ್ರಾಮಕ್ಕೆ ಸ್ಯ॥ 1901—02, 1902—03 ಮತ್ತು 1903—04ನೆ ಸಾಲಿನ ಬಾಬತು ಬರಬೇಕಾದ ಕಂದಾಯ ಬಾಕಿ ಬಗ್ಗೆ ಚಿಕ್ಕಮಗಳೂರು ತಾಲ್ಲೂಕು ಮರ್ಲೆಹೋಬಳಿ ಹೆಜ್ಜಿಗೇನಹಳ್ಳಿ ಅರ್ಧ ಜೋಡಿ ಗ್ರಾಮವನ್ನು ಹಜರತ್ ಕಡೂರು ಡಿಸ್ಟ್ರಿಕ್ಟ್ ಡೆ॥ ಕ॥ ಸಾಹೇಬರವರ ರೂಬರೂಬ್ಯಾಗಲಿ ಯಾ ಆ॥ ಕ॥ ಸಾಹೇಬರವರ ರೂಬರೂಬ್ ಯಾಗಲಿ ಸ್ಯ॥ 1904ನೆ ಇಸವಿ ಜುಲ್ಯೆ ತಾರೀಖು 4ನೆ ಸೋಮವಾರ ದಿವಸ ದಿವಿ 11 ಘಂಟೆಗೆ ಚಿಕ್ಕಮಗಳೂರು ವೊಕ್ಕಾಮಿನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಹರಾಜು ತಪಶೀಲು ಹಿಂದಿನ ವಾರದ ಗೆಜೆಟಿನಲ್ಲಿ ನಮೂದಿರುವದು ನೋಡಲಾಗಿ ತಿಳಿಯಲಾಗುತ್ತೆ.

ಪೀಟರ್ಸ್ ಜಾರ್ಜ್ ಡಿಸೋಜ,
ಫಾರ್ ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್ ಚಿಂತಾಮಣಿ ಡಿವಿಜ಼ನ್ ಅಸಿಸ್ಟೆಂಟ್ ಕಮಿಷನರು ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟು.

ಇನ್ಸ್ಟಿಹಾರು.

ಇದರಿಂದ ಸಮಸ್ತ ಜನಗಳಿಗು ತಿಳಿಯುಪಡಿಸುವದೇನಂದರೆ:—

ಹುರೇಬಿಯಲ್ಲಿ ಕಂಡ ಮಾಲುಗಳು ಕಳವಾದ ಮಾಲುಗಳೆಂದು ನನ್ನ ಕೋರ್ಟು ಚಾಲ್ತಿ ಸಾಲ್ಲ 1903–4ನೆ ಕ್ರಿಮಿನಲ್ 18ನೆ ನಂಬರ್ ಮೊಕದ್ದಮೆಯಲ್ಲಿ ಹಾಜರ್ಪಡಿಸಲ್ಪಟ್ಟಿರತಕ್ಕದ್ದು ವಾರಸುದಾರರಿಲ್ಲದೆ ಕೋರ್ಟಿನಲ್ಲಿ ಅಮಾನತ್ತಿನಲ್ಲಿ ಇಟ್ಟು ಇರುತ್ತೆ. ಈ ಮಾಲುಗಳಿಗೆ ಹಕ್ಕಿರತಕ್ಕವರು ಈ ತಾರೀಖು ಲಾಗಾಯಿತು 6 (ಆರು) ತಿಂಗಳ ವಳಗಾಗಿ ಈ ಕೋರ್ಟು ರೂಬರೂಬು ಖುದ್ದು ಹಾಜರಾಗಿ ತಮ್ಮಗಳ ಹಕ್ಕನ್ನು ಸ್ಥಿರಪಡಿಸಿ ಮಾಲುಗಳನ್ನು ಪಡಿಯತಕ್ಕದ್ದು.

ನಂಬರ್ 46.	ಬಂದು ಸಣಗೆ ಕೆಂಪು ರುಮಾಲು.	ಕೋಲಾರ ಡಿಸ್ಟ್ರಿಕ್ಟ್ ಮುಳಬಾಗಲ ತಾಲ್ಲೂಕು ನಂಗ್ಲಿ ಗ್ರಾಮದ ಬಳಿ ತೆಂಗಿನ ತೋಟದಲ್ಲಿ ಸಿಕ್ಕಿದ್ದಾಗಿರುತ್ತೆ.
,, 47.	ಬಂದು ಬುಗಡಿ ಅಂಚಿನ ಪಂಚೆ.	
,, 48.	ಬಂದು ಹಸರು ಶೀರೆ.	
,, 49.	ಬಂದು ಕರಿ ಶೀರೆ.	
,, 50.	ಬಂದು ಹೈಟ್ನ ಶೀರೆ.	

ಮೇಲ್ಕಂಡ ವಾಯಿದೆ ಗತಿಸಿದ ನಂತರ ಡಿಟೋ ಮಾಲುಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಿ ಹರಾಜು ಮೊಬಲಗನ್ನು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡುತ್ತೆ.

ಕೆ. ಆರ್. ಶ್ರೀನಿವಾಸೈಯ್ಯಂಗಾರ್,
ಅಸಿಸ್ಟೆಂಟ್ ಕಮ್ಮಿಷನರ್ ಮತ್ತು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್.